Site: WWW.cescmysore.org CIN: U40109KA2004SGC035177

**ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ**

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನೊಂದಾಯಿತ ವಿಳಾಸ: ನಂ 29, ಸೆಸ್ಕ್, ನಿಗಮ ಕಛೇರಿ ಗ್ರೌಂಡ್ ಫ್ಲೋರ್ ಕಾವೇರಿ ಗ್ರಾಮೀಣ ಬ್ಯಾಂಕ್ ರಸ್ತೆ ವಿಜಯನಗರ 2ನೇ ಹಂತ ಮೈಸೂರು-570017

ಫೋನ್: 08174-233607
Email: aeecescask@gmail.com

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ) ರವರ ಕಛೇರಿ, ಕಾ ಮತ್ತು ಪಾ ಉಪ-ವಿಭಾಗ, ಮೊದಲಿಯಾರ್ ರಸ್ತೆ, ಅರಸೀಕೆರೆ-573103.

ಸಂಖ್ಯೆ: ಸ.ಕಾ.ಇಂ(ವಿ)/ಎ.ಇ.ಟಿ./ಅಕೆರೆ/2018-19/ 1400 ದಿನಾಂಕ: 9-7-18

## // ಜನ ಸಂಪರ್ಕ ಸಭೆಯ ನಡಾವಳಿ//

**ವಿಷಯ :** ಅರಸೀಕೆರೆ ಉಪವಿಭಾಗದಲ್ಲಿ ನಡೆದ ಜನ ಸಂಪರ್ಕ ಸಭೆಯ ಕುರಿತ ಸಭಾ ನಡಾವಳಿಗಳು.

*********

**ಅರಸೀಕೆರೆ** ಉಪವಿಭಾಗದಲ್ಲಿ ದಿನಾಂಕ : 04.06.18 ರಂದು ಮಧ್ಯಾಹ್ನ 03 :00 ಗಂಟೆಯಲ್ಲಿ ಮಾನ್ಯ ಶ್ರೀ. ಸುಚೇತನ ಅಧೀಕ್ಷಕ ಇಂಜಿನಿಯರ್(ವಿ) ಹಾಸನ ರವರ ಅಧ್ಯಕ್ಷತೆಯಲ್ಲಿ ನಡೆದ ತ್ರೈಮಾಸಿಕ ಜನಸಂಪರ್ಕ ಸಭೆಯ ನಡಾವಳಿಗಳು.

ಹಾಜರಿದ್ದ ಅಧಿಕಾರಿಗಳು : ಶ್ರೀ. ಸುಚೇತನ ಅ.ಇಂ(ವಿ) ಹಾಸನ ವೃತ್ತ ಹಾಸನ.
: ಶ್ರೀ ಸೋಮಶೇಖರ್ ಗೌಡ ಕಾ.ಇಂ(ವಿ) ಅರಸೀಕೆರೆ ವಿಭಾಗ.
: ಶ್ರೀ ಮನೋಹರ್ ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ) ಅರಸೀಕೆರೆ.
: ಶ್ರೀ ನಾಗರಾಜು ಲೆಕ್ಕಾಧಿಕಾರಿ ಸೆಸ್ಕ್ ಅರಸೀಕೆರೆ ವಿಭಾಗ.
: ಶ್ರೀ ಸದಾಶಿವ ಲೆಕ್ಕಾಧಿಕಾರಿ(ಆಂ.ಪ), ಅರಸೀಕೆರೆ ವಿಭಾಗ.
: ಶ್ರೀ ಮಂಜುನಾಥ ಬಿ.ಎನ್. ಸ ಇಂ.(ವಿ), ಮಾರುತಿನಗರ ಶಾಖೆ.
: ಶ್ರೀ ಅರವಿಂದ ಕುಮಾರ್ ಬಿ.ವಿ. ಸಂಚಾಲಕರು & ಸ.ಇಂ(ವಿ) ಅರಸೀಕೆರೆ ಶಾಖೆ.
: ಶ್ರೀ ಚಿಕ್ಕ ನಾಯ್ಕ ಶಾಖಾಧಿಕಾರಿ(ವಿ) ಬೆಳಗುಂಬ ಶಾಖೆ
: ಶ್ರೀ ಆನಂದ ಹೆಚ್.ವಿ ಶಾಖಾಧಿಕಾರಿ(ವಿ) ಹಾರನಹಳ್ಳಿ ಶಾಖೆ.

ಸಭೆಗೆ ಹಾಜರಿದ್ದ ಗ್ರಾಹಕರ ಸಂಖ್ಯೆ-15

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ) ಅರಸೀಕೆರೆ ರವರು ಸಭೆಗೆ ಹಾಜರಾಗಿದ್ದ ಎಲ್ಲಾ ಅಧಿಕಾರಿಗಳನ್ನು, ಶಾಖಾಧಿಕಾರಿಗಳನ್ನು ಮತ್ತು ಗ್ರಾಹಕರನ್ನು ಸ್ವಾಗತಿಸಿ, ಕುಂದುಕೊರತೆಗಳನ್ನು ತಿಳಿಸಲು ಉದ್ದೇಶಿಸಿ ಮಾತನಾಡಿ, ಮೊದಲಿಗೆ ಹಿಂದಿನ ನಡಾವಳಿಯನ್ನು ಚರ್ಚಿಸಲಾಯಿತು.

| ಕ್ರ.ಸಂ | ನಡಾವಳಿಯ ಸೂಚನೆಗಳು | ತೆಗೆದುಕೊಂಡ ಕ್ರಮ |
|---|---|---|
| 1 | ಮೋಹನ್ ಕುಮಾರ್ ಜೆ : ಕಾಟೀಕೆರೆ ಇವರ ಹೊಸದಾದ 63 ಹೆಚ್.ಪಿ. ಪವರ್ ಸ್ಥಾವರದ (ಕಾಯರ್ ಇಂಡಸ್ಟ್ರೀಸ್‌ಗೆ) ಅರ್ಜಕ್ಕೆ ನಿಂತ ಕಾಮಗಾರಿಯನ್ನು ಪೂರ್ಣಗೊಳಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲು ಅರ್ಜಿ ಸಲ್ಲಿಸಿರುತ್ತಾರೆ. | ಸದರಿ ಕಾಮಗಾರಿಗೆ 100ಕೆವಿಎ ಪರಿವರ್ತಕದ ಸ್ಟ್ರಕ್ಚರ್ ಸಾಮಗ್ರಿಗಳು ಉಗ್ರಾಣದಲ್ಲಿ ಲಭ್ಯವಿರುವುದಿಲ್ಲ. ಆದ್ದರಿಂದ ಬೇರೆ ವಿಭಾಗದ ಉಗ್ರಾಣದಿಂದ ಹೊದಗಿಸಿ ಶೀಘ್ರವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು ಎಂದು ತಿಳಿಸಲಾಯಿತು. |
| 2 | ನಾಗೇಂದ್ರ : ಚಂದ್ರಾಪುರ ಗ್ರಾಮರವರು ಗ್ರಾಮದಲ್ಲಿರುವ ಕಬ್ಬಿಣದ ಕಂಬಗಳನ್ನು ಬದಲಾಯಿಸಲು ಕೋರಿರುತ್ತಾರೆ. | ಸಂಬಂಧಪಟ್ಟ ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ, ಶೀಘ್ರವಾಗಿ ಕಂಬವನ್ನು ಬದಲಾಯಿಸಲು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. |

| | | |
|---|---|---|
| 3 | ಉಮೇಶ : ಚಂದ್ಲಾಪುರ ಗ್ರಾಮ ದವರು ಕುಡಿಯುವ ನೀರಿನ ಸ್ಥಾವರದ ಕಾಮಗಾರಿ ಅರ್ಧಕ್ಕೆ ನಿಂತಿದ್ದು, ಕಾಮಗಾರಿಯನ್ನು ಪೂರ್ಣಗೊಳಿಸಲು ಕೋರಿರುತ್ತಾರೆ. | E&I ಯೋಜನೆಯಡಿ, ಸದರಿ ಗ್ರಾಮಕ್ಕೆ ಪರಿವರ್ತಕವು ಮಂಜೂರಾಗಿದ್ದು, ಪರಿವರ್ತಕ ಅಳವಡಿಸಲು ಕೆಲವು ಸಾಮಗ್ರಿಗಳು ಉಗ್ರಾಣದಲ್ಲಿ ದಾಸ್ತಾನು ಇಲ್ಲದಿರುವುದರಿಂದ, ಈಗಾಗಲೇ ಸಾಮಾಗ್ರಿಯನ್ನು ಪೂರೈಸಲು ನಿಗಮ ಕಛೇರಿಗೆ ಕೋರಿಕೆ ಸಲ್ಲಿಸಲಾಗಿದ್ದು, ಶೀಘ್ರವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಯಿತು. |
| 4 | ಮೋಹನ್ ಕುಮಾರ್ ಹಾಗೂ ಇತರರು ಟಿ.ಕೋಡಿಹಳ್ಳಿ ಗ್ರಾಮ : ಇವರು ತಮ್ಮ ಐ.ಪಿ.ಸ್ಥಾವರಗಳಿಗೆ 25ಕೆವಿಎ ಪರಿವರ್ತಕಕ್ಕೆ 06 ಸಂಖ್ಯೆಯ ಕೊಳವೆ ಭಾವಿಗಳಿದ್ದು, ಅದರಲ್ಲಿ 04 ಸಂಖ್ಯೆ ಕೊಳವೆ ಭಾವಿಗಳಿಗೆ ಹೆಚ್ಚುವರಿ ಹೆಚ್.ಪಿ.ಗೆ ಠೇವಣಿಯನ್ನು ಕಟ್ಟಿದ್ದು ಈಗ ಪರಿವರ್ತಕವು ಹೆಚ್ಚು ಒತ್ತಡದಿಂದ ಕೂಡಿದ್ದು, ಅದನ್ನು 63ಕೆವಿಎ ಪರಿವರ್ತಕದಿಂದ ಬದಲಾಯಿಸಲು ಕೋರಿರುತ್ತಾರೆ. | ಹೊಸ 63ಕೆವಿಎ ಪರಿವರ್ತಕದ ದಾಸ್ತಾನು ಉಗ್ರಾಣದಲ್ಲಿ ಲಭ್ಯವಿಲ್ಲದಿರುವುದರಿಂದ, ಈಗಾಗಲೇ ನಿಗಮ ಕಛೇರಿಗೆ ಕೋರಿಕೆ ಸಲ್ಲಿಸಲಾಗಿದ್ದು, ಉಗ್ರಾಣಕ್ಕೆ ಪರಿವರ್ತಕ ಪೂರೈಕೆ ಆದ ನಂತರ ಪರಿವರ್ತಕವನ್ನು ಅಳವಡಿಸಲಾಗುವುದು. |
| 5 | ಯೋಗೀಶ್ ಬಿ.ಓ. ಬೊಮ್ಮೇನಹಳ್ಳಿ : ಇವರು ಗ್ರಾಮದ ಪರಿವರ್ತಕದಲ್ಲಿ ವೋಲ್ಟೇಜ್ ಸಮಸ್ಯೆ ಇದ್ದು ಅದನ್ನು ಸರಿಪಡಿಸಿ ಕೊಡುವಂತೆ ಮನವಿ ಸಲ್ಲಿಸಿರುತ್ತಾರೆ. | ಸಂಭಂಧಪಟ್ಟ ಶಾಖಾಧಿಕಾರಿರವರಿಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. |

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ),ಅರಸೀಕೆರೆ ರವರು ವಂದನೆಗಳೊಂದಿಗೆ ಸಭೆಯನ್ನು 04:30ಕ್ಕೆ ಮುಕ್ತಾಯಗೊಳಿಸಿದರು.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ),
ಸೆಸ್ಕ್., ಉಪವಿಭಾಗ,
ಅರಸೀಕೆರೆ.

**ಪ್ರತಿಗಳು:**

1) ಕಾರ್ಯಪಾಲಕ ಇಂಜಿನಿಯರ್(ವಿ) ವಿಭಾಗ ಕಚೇರಿ ಸೆಸ್ಕ್., ಅರಸೀಕೆರೆ ರವರ ಆದ್ಯ ಅವಗಾಹನೆಗಾಗಿ..
2) ಲೆಕ್ಕಾಧಿಕಾರಿ ಸೆಸ್ಕ್., ವಿಭಾಗ ಕಛೇರಿ ಅರಸೀಕೆರೆರವರ ಮಾಹಿತಿಗಾಗಿ
3) ಎಲ್ಲಾ ಶಾಖಾಧಿಕಾರಿಗಳು(ವಿ) ಮಾರುತಿ ನಗರ/ಅರಸೀಕೆರೆ/ಬೆಳಗುಂಬ/ಹಾರನಹಳ್ಳಿ/ರವರ ಮಾಹಿತಿಗಾಗಿ.
4) ಹಿರಿಯ ಸಹಾಯಕರು ಸೆಸ್ಕ್., ಕಂದಾಯ ಶಾಖೆ ಉಪವಿಭಾಗ ಅರಸೀಕೆರೆ.
5) ಮುಖ್ಯ ಕಡತಕ್ಕೆ.